ಅವನ ಮನಸ್ಸು ಕೊನೆಗೆ ಅದನ್ನು ನೇರ ದೇಹಕ್ಕೆ ದಾಟಿಸಿಬಿಟ್ಟಿತು. ಮೆದುಳಿನ ತುಂಬಾ ಜ್ವಲಿಸುತ್ತಿದ್ದ ಚಿಂತೆ ನರನಾಡಿಗಳುದ್ದಕ್ಕೂ ಹರಿದುಬಿಟ್ಟಿತು ರಕ್ತದೊತ್ತಡವಾಗಿ! ಹೌದು ಶರತ್. ಇದೇ... ಇದೇ ಕಾರಣ ಅಪ್ಪನ ಬಿಪಿಗೆ. ಇದೇ ಕಾರಣ ಅಪ್ಪನ ಈ ಸ್ಥಿತಿಗೆ!''

ನಮ್ಮ ಇಷ್ಟು ದಿನಗಳ ತನಿಖೆಗೆ ಸಿಕ್ಕದ ಈ ಅನಿರೀಕ್ಷಿತ ಉತ್ತರ ಕೇಳಿ ನಾನು ಅಪ್ರತಿಭನಾದೆ.

''ಅಮ್ಮ ತಾನಾಗಿ ಹೇಳುವ ತನಕ ನನಗಿದು ಗೊತ್ತೇ ಆಗಲಿಲ್ಲ ಶರತ್. ಗೊತ್ತಾದರೂ ಏನೂ ಮಾಡುವಂತಿರಲಿಲ್ಲ. ಆಗಾಗ ಮನೆಗೆ ಬರುತ್ತಿದ್ದ ನಾನು ಅವರ ನಡುವೆ ನಡೆಯುತ್ತಿದ್ದ ಜಗಳವನ್ನು ಯಾವುದೇ ಗಂಡಹೆಂಡತಿಯ ನಡುವೆ ನಡೆಯುವ ಸಾಮಾನ್ಯ ಕಲಹವೆಂದು ತಿಳಿದೆನೇ ಹೊರತು ಅದು ಈ ಮಟ್ಟಿಗೆ ಗಂಭೀರವಾದುದೆಂದು ಅಂದಾಜಿಸಲೇ ಇಲ್ಲ. ನಿಜ... ಒಬ್ಬ ಅಪ್ಪನ ಹೊರತಾಗಿ ಮತ್ಯಾರಿಗೂ ಈ ಕಾಯಿಲೆಯನ್ನು ಗುಣಪಡಿಸುವುದು ಸಾಧ್ಯವಿರಲಿಲ್ಲ. ಆದರೆ, ದುರದೃಷ್ಟ... ಅವನದನ್ನು ಗುಣಪಡಿಸಿಕೊಳ್ಳುವ ಬದಲು ಇಮ್ಮಡಿಸಿಕೊಳ್ಳುತ್ತಲೇ ಹೋದ. ಕೊನೆಗೆ, ಅವನೇ ಸಾಕಿಕೊಂಡ ಮನೋವ್ಯಾಧಿ ಅವನನ್ನು ಈ ಸ್ಥಿತಿಗೆ ತಂದು ನಿಲ್ಲಿಸಿತು.''

ಇಷ್ಟು ಹೇಳಿದ ಮಂದಾ ಮೌನವಾದಳು. ದೂರದಲ್ಲಿ ತೇಲುತ್ತಿದ್ದ ಮೋಡಗಳಾಗಲೇ ತೇಲಿ ಕಣ್ಮರೆಯಾಗಿದ್ದವು. ಚಿಂತೆ, ಒತ್ತಡಗಳು ಬಿಪಿಯನ್ನು ಉತ್ತೇಜಿಸುತ್ತವೆ ಎಂಬ ಮನೋಲೋಕದ ಹೇಳಿಕೆ ಈಗ ಕಣ್ಣೆದುರೇ ಸತ್ಯವಾಗಿತ್ತು. ರಕ್ತದೊತ್ತಡ ತರಿಸಿದ ಅವನ ಮನಃಸ್ಥಿತಿ, ಅಂದು ಮಧ್ಯಾಹ್ನ ತಿಳಿಯದೇ ತಿಂದ ಉಪ್ಪಿನಕಾಯಿ ಅನ್ನ, ರುಕ್ಮಿಣತ್ತೆ ಅರಿಯದೇ ಕೊಟ್ಟ ಉಪ್ಪು ನೀರು... ಇವುಗಳ ಪೈಕಿ ಯಾವುದು ನಿಜವಾದ ಹೊಣೆಗಾರ? ಕಟ್ಟಕಡೆಗೆ ಮನುಷ್ಯ ತನ್ನೆಲ್ಲಾ ಅನಾರೋಗ್ಯಕ್ಕೆ ತಾನೇ ಕಾರಣನೇ?

''ನಿಜ ಮಂದಾ... ದೇಹದ ಕಾಯಿಲೆಗಳಿಗೆ ಮದ್ದಿದೆ. ಆದರೆ, ಮನಸ್ಸಿನ ಕಾಯಿಲೆಗಳಿಗಿಲ್ಲ. ಈ ಹಬ್ಬ, ಆಚರಣೆ, ಕಾರ್ಯಕ್ರಮ, ಯಕ್ಷಗಾನ ಎಂದೆಲ್ಲಾ ಹಿರಿಯರು ಏಕೆ ಮಾಡಿಕೊಂಡಿದ್ದರು ಗೊತ್ತೇ? ನೀನೀಗ ಹೇಳಿದೆಯಲ್ಲಾ, ಅಂಥದೇ ವಿಕಾರಗಳಿಂದ ಪಾರಾಗಲು! ತನ್ನ ಚಿಂತೆಗಳ ನಾಲ್ಕು ಜನರ ನಡುವೆ ಹಂಚಿಕೊಂಡು ಹಗುರಾಗಲು! ನಾಲ್ಕು ಜನ ಸೇರಿದಾಗ, ಒಬ್ಬರ ಸಮಸ್ಯೆಗೆ ಇನ್ನೊಬ್ಬರ ಬಳಿ ಪರಿಹಾರ ದೊರಕುತ್ತದೆ. ಇನ್ಯಾರದೋ ತಟ್ಟೆಯಲ್ಲಿ ಬಿದ್ದಿರುವ ಹಲ್ಲಿಯನ್ನು ನೋಡಿದಾಗ ನಮ್ಮ ಲೋಟದಲ್ಲಿರುವ ನೊಣ ಸಣ್ಣದೆಂಬುದು ಅರ್ಥವಾಗುತ್ತದೆ. ಆದರೆ, ಸಮಾಜದಲ್ಲಿ ಬೆರೆಯದ ನಾಣಿ ಮಾವ ತನ್ನೊಳಗೆ ಕ್ಷುಲ್ಲಕ ಯೋಚನೆಗಳನ್ನು, ಕೀಳರಿಮೆ, ಅಭದ್ರತೆಗಳಷ್ಟನ್ನೇ ಬೆಳೆಸಿಕೊಂಡ. ಈ ಎಲ್ಲ ವಿಕೃತಿಗಳಾಚೆಗೆ ಅವನು ಒಂದೇ ಒಂದು ಸಲ ತಣ್ಣಗೆ ಯೋಚಿಸಿದ್ದರೆ...''

ಎಲ್ಲವೂ ಮುಗಿದು ಹೋಗಿರುವ ಈ ಕ್ಷಣಕ್ಕೆ ಅತ್ಯಂತ ಅಸಂಬದ್ಧವಾದ ಈ ವಿಶ್ಲೇಷಣೆ ಮಂದಾಳ ನಿಟ್ಟುಸಿರಿನೊಂದಿಗೆ ಕೊನೆಯಾಯಿತು. ಮುಂದೆ ಹೇಳಲಿಕ್ಕೆ ಏನೂ ಇಲ್ಲವೇನೋ ಎಂಬಂತೆ ಇಬ್ಬರೂ ಕುಳಿತಲ್ಲಿಂದ ಮೇಲೆದ್ದು, ತಣ್ಣಗೆ ಸೋಕುತ್ತಿರುವ ಗಾಳಿಗೆ ಮೈಯೊಡ್ಡಿ ಮನದೊಳಗಿನ ಉರಿಯನ್ನು ಕಡಿಮೆ ಮಾಡಿಕೊಳ್ಳಲೆತ್ನಿಸುತ್ತಾ ಗುಡ್ಡವಿಳಿದೆವು.


### ವಿನಾಯಕ ಅರಳಸುರಳಿ

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ಅರಳಸುರಳಿ ಗ್ರಾಮದವರು. ಕೆಲಕಾಲ ಬೆಂಗಳೂರಿನ ಖಾಸಗೀ ಸಂಸ್ಥೆಗಳಲ್ಲಿ ಅಕೌಂಟ್ಸ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ, ಪ್ರಸ್ತುತ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಕವನ, ಲಲಿತ ಪ್ರಬಂಧ ಹಾಗೂ ಸಣ್ಣಕತೆಗಳನ್ನು ಬರೆದಿದ್ದಾರೆ. ಅವರ ಲಲಿತ ಪ್ರಬಂಧಗಳ ಸಂಕಲನ 'ನವಿಲುಗರಿ ಮರಿ ಹಾಕಿದೆ'.